ಇನ್ನುಳಿದ ಎರಡು ಹಳ್ಳಿಗಳಿಗೆ ಮೇ 15ರೊಳಗಾಗಿ ನೀರನ್ನು ಒದಗಿಸಬೇಕೆಂಬ ಗುರಿಯನ್ನು ಇಟ್ಟು ಕೊಂಡಿದ್ದೇವೆ. ಇದರ ನಂತರ ನಮಗೆ ಹೆಚ್ಚಿನ ಹಣ ಸಿಕ್ಕಿದ ಕೂಡಲೆ ಇನ್ನಿತರ ಹಳ್ಳಿಗಳಿಗೂ ನೀರನ್ನು ಒದಗಿಸುವ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ.

ಅಲ್ಪಾವಧಿ ಪ್ರಶ್ನೆ ಸಂ. 18 ಶ್ರೀ ಬಿ. ಭೈರಪ್ಪಾಜಿ (ತುರುವೆಕೆರೆ) .—ಮಾನ್ಯ ವಿದ್ಯಾ ಮಂತ್ರಿಗಳು ದಯವಿಟ್ಟು ಈ ಕೆಳಗಿನ ವಿಷಯಗಳಿಗೆ ಉತ್ತರಿಸುವರೆ :—

ಅ. ಸಿ2 (ಇಟಿಎಫ್ ಕೆಎಸ್ಎ)1:82-83ನೇ ದಿನಾಂಕದ ಆದೇಶದ ಮೇರೆಗೆ ವಾಣಿಜ್ಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾಸಿಕ ಶುಲ್ಕವನ್ನು ಹೆಚ್ಚಿಸಿರುವುದು ನಿಜವಲ್ಲವೇ ;

ಆ. ಸದರಿ ಶುಲ್ಕವನ್ನು ಶೇಕಡ ನಲವತ್ತರಷ್ಟು ಹೆಚ್ಚಿಸಿರುವುದು ನಿಜವಲ್ಲವೇ ;

ಇ. ಈ ರೀತಿ ಶುಲ್ಕವನ್ನು ಹೆಚ್ಚಿಸಲು ಕಾರಣವೇನು ;

ಈ. ಇದರಿಂದ ಕಾಲೇಜು ವಿದ್ಯಾಭ್ಯಾಸಕ್ಕೆ ಸೇರಲಾಗದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೆ ;

ಉ. ಹಾಗಿದ್ದಲ್ಲಿ ಸರ್ಕಾರದವರು ಇದನ್ನು ಪರ್ಯಾಲೋಚಿಸಿ ಸದರಿ ಆದೇಶವನ್ನು ವಾಪಸ್ಸು ಪಡೆದುಕೊಳ್ಳುವರೇ ?

ಶ್ರೀ ಬಿ. ರಾಚಯ್ಯ (ವಿದ್ಯಾಮಂತ್ರಿಯವರು) :—

ಅ. ಹೌದು

ಆ. 1. ಪ್ರಥಮ ದರ್ಜೆಗೆ ರೂ. 3-00 ಹೆಚ್ಚಿಸಲಾಗಿದೆ.

2. ಪ್ರೌಢ ದರ್ಜೆಗೆ ರೂ. 4-00 ಹೆಚ್ಚಿಸಲಾಗಿದೆ.

3. ಪ್ರವೀಣ ದರ್ಜೆಗೆ ರೂ. 2-00 ಹೆಚ್ಚಿಸಲಾಗಿದೆ.

ಇ. ಬೆರಳಚ್ಚು ಯಂತ್ರಗಳ ಬೆಲೆ, ಯಂತ್ರಗಳ ಬಿಡಿ ಭಾಗಗಳು (ಸ್ಪೇರ್ ಪಾರ್ಟ್ಸ್) ಬೆಲೆ, ಶಾಯಿ ಪಟ್ಟಿಯ ಬೆಲೆಗಳು ವಾಣಿಜ್ಯ ಶಾಲೆಗಳನ್ನು ನಡೆಸುವ ಖರ್ಚು ತುಂಬಾ ದುಬಾರಿಯಾಗಿವೆ. ವಾಣಿಜ್ಯ ಶಾಲೆಗಳನ್ನು ನಡೆಸುವ ಕಟ್ಟಡಗಳ ಬಾಡಿಗೆಗಳು ಜಾಸ್ತಿಯಾಗಿದೆ. ಉಪಾಧ್ಯಾಯರುಗಳ ಸಂಬಳಗಳನ್ನು ಹೆಚ್ಚಿಸಲಾಗಿದೆ.

ಈ. ವಾಣಿಜ್ಯ ಶಾಲೆಗಳಲ್ಲಿ ಕೆಲಸಗಳಿಗೆ ಹೋಗುವವರು, ಕಾಲೇಜಿಗೆ ಹೋಗುವವರೂ ಮತ್ತು ಇತರರೂ ಕಲಿಯುತ್ತಾರೆ.

ಉ. ಮೇಲೆ ಹೇಳಿದ (ಇ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಮಹದೇವ್.—ಈ ರೀತಿ ಮಾಸಿಕ ಶುಲ್ಕವನ್ನು 3-4 ರೂಪಾಯಿಗಳಷ್ಟು ಜಾಸ್ತಿ ಮಾಡಿರುವುದರಿಂದ ಬಡ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ? ಇದನ್ನು ಕಲಿಯಲು ಪದವೀಧರರು ಹೆಚ್ಚು ಹೋಗುವುದಿಲ್ಲ. ಪದವೀಧರರು ಅಲ್ಲದವರೇ ಕಲಿಯಲು ಹೋಗುತ್ತಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶದಿಂದ ಬಂದಂಥ ಬಡವರು ಇಷ್ಟೊಂದು ಫೀಯನ್ನು ಕೊಡುವ ಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಇಂತಹ ಜನರಿಗೆ ತಾವು ಏನು ಮಾಡಬೇಕೆಂದಿದ್ದೀರಿ ? ಈ ವಿಚಾರವನ್ನು ಸಹ ಎಜುಕೇಷನ್ ಬಿಲ್‌ನಲ್ಲಿ ಸೇರಿಸಬಹುದಾಗಿತ್ತು. ಆದರೆ ತಾವು ಯಾರದೋ ಪ್ರಭಾವಕ್ಕೆ ಒಳಗಾಗಿ ಸೇರಿಸಿಲ್ಲ. ಬೆರಳಚ್ಚು ಯಂತ್ರಗಳ ಬೆಲೆ ಜಾಸ್ತಿಯಾಗಿದೆ, ಉಪಾಧ್ಯಾಯರ ಸಂಬಳ ಜಾಸ್ತಿಯಾಗಿದೆ ಎಂಬ ಕಾರಣಗಳನ್ನು ಕೊಟ್ಟು ಶುಲ್ಕವನ್ನು ಜಾಸ್ತಿ ಮಾಡಿದ್ದು ಸರಿಯಲ್ಲ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಇದನ್ನು ಕಡಿಮೆ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಇದನ್ನು ಜಾಸ್ತಿ ಮಾಡುವ ಅವಶ್ಯಕತೆ ಏನಿತ್ತು ಎಂದು ಕೇಳಿದ್ದಾರೆ. ಯಂತ್ರಗಳ ಬೆಲೆ ಜಾಸ್ತಿಯಾಗಿದೆ, ಈ ಯಂತ್ರಗಳ ರಿಪೇರಿ ಖರ್ಚು ಕೂಡ ಜಾಸ್ತಿಯಾಗಿದೆ, ಉಪಾಧ್ಯಾಯರಿಗೆ ಸಂಬಳ ಜಾಸ್ತಿ ಕೊಡಬೇಕಾಗಿದೆ, ಆದ್ದರಿಂದ ಮಾಸಿಕ ಶುಲ್ಕ ಜಾಸ್ತಿ ಮಾಡಬೇಕೆಂದು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದರು. ಅದರ ಪ್ರಕಾರ ಪ್ರಥಮ ದರ್ಜೆಗೆ 3 ರೂಪಾಯಿಗಳ ಪ್ರಕಾರ, ಪ್ರೌಢದರ್ಜೆಗೆ ನಾಲ್ಕು ರೂಪಾಯಿಗಳ ಪ್ರಕಾರ ಮತ್ತು ಪ್ರವೀಣ ದರ್ಜೆಗೆ

ಎರಡು ರೂಪಾಯಿಗಳ ಪ್ರಕಾರ ಜಾಸ್ತಿ ಮಾಡಿದ್ದೇವೆ. ಯಾರು ಯಾರು ಸರ್ಕಾರಿ ನೌಕರಿಯಲ್ಲಿದ್ದಾರೆ. ಅಂತಹವರು ಈ ಶುಲ್ಕವನ್ನು ಕೊಡುವುದಕ್ಕೆ ಯಾವ ತೊಂದರೆಯೂ ಆಗುವುದಿಲ್ಲ. ಆದರೆ ನೌಕರಿಯಲ್ಲಿ ಇಲ್ಲದವರು ಇದನ್ನು ಇಷ್ಟೊಂದು ಶುಲ್ಕ ಕೊಟ್ಟು ಕಲಿಯಲು ತೊಂದರೆಯಾಗಬಹುದೆಂದು ನನ್ನ ಮನಸ್ಸಿಗೆ ಬಂದಿದೆ. ಆದ್ದರಿಂದ ಇಂತಹವರ ಬಗ್ಗೆ ಕಡಿಮೆ ಮಾಡಲು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ.—ಶೇಕಡಾ 40 ರಷ್ಟು ಶುಲ್ಕವನ್ನು ಯಾವ ಆಧಾರದ ಮೇಲೆ ಜಾಸ್ತಿ ಮಾಡಿದಿರಿ ? ಇದರಿಂದ ಎಸ್. ಸಿ. ಮತ್ತು ಎಸ್. ಟಿ. ಅಭ್ಯರ್ಥಿಗಳಿಗೆ ತೊಂದರೆಯಾಗುವುದಿಲ್ಲವೇ ? ಈ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದಿದ್ದರಿಂದ ಜಾಸ್ತಿ ಮಾಡಲಾಯಿತು ಎಂದು ಹೇಳಿದಿರಿ. ಯಾವ ಸಂಘದವರು ಮನವಿ ಸಲ್ಲಿಸಿದ್ದಾರೆ ಮತ್ತು ಅದರ ಅಧ್ಯಕ್ಷರು ಯಾರು ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ರಾಚಯ್ಯ.—ಈ ವಾಣಿಜ್ಯ ಶಿಕ್ಷಣ ಶಾಲೆಗಳನ್ನು ನಡೆಸುವವರಿಂದ ಸರ್ಕಾರಕ್ಕೆ ಮನವಿಗಳು ಬಂದಿವೆ. ಯಾರುಯಾರಿಂದ ಮನವಿಗಳು ಬಂದಿವೆ ಎಂಬ ಬಗ್ಗೆ ಈಗ ನನ್ನ ಬಳಿ ವಿವರಗಳಿಲ್ಲ ಪ್ರಥಮ ದರ್ಜೆಗೆ 9 ರೂಪಾಯಿಗಳಿದ್ದುದನ್ನು 12 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಕೇಳಿದ್ದರು. ಅದರಂತೆ ಹೆಚ್ಚು ಮಾಡಿದ್ದೇವೆ. ಪ್ರೌಢದರ್ಜೆಗೆ 10 ರೂಪಾಯಿಗಳಿದ್ದುದನ್ನು 15 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಕೇಳಿದ್ದರು. ಆದರೆ ನಾವು 14 ರೂಪಾಯಿಗಳೆಂದು ಮಾಡಿದ್ದೇವೆ. ಪ್ರವೀಣ ದರ್ಜೆಗೆ 14 ರೂಪಾಯಿಗಳಿಂದ 20 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಕೇಳಿದ್ದರು. ಆದರೆ ನಾವು 14 ರೂಪಾಯಿಗಳಿಂದ 16 ರೂಪಾಯಿಗಳಿಗೆ ಹೆಚ್ಚು ಮಾಡಿದ್ದೇವೆ. ಈರೀತಿ ಹೆಚ್ಚು ಮಾಡಲು ಕಾರಣ ವೇನೆಂಬುದನ್ನು ಈಗಾಗಲೇ ಹೇಳಿದ್ದೇನೆ. ಅವರು ಕೇಳಿದ ರೀತಿಯಲ್ಲಿಯೇ ನಾವು ಜಾಸ್ತಿ ಮಾಡಿಲ್ಲ. ಸ್ವಲ್ಪ ಮಟ್ಟಿಗೆ ಮಾತ್ರ ಜಾಸ್ತಿ ಮಾಡಲಾಗಿದೆ. ಇದರಿಂದ ಎಸ್. ಸಿ. ಮತ್ತು ಎಸ್. ಟಿ. ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲ. ಏಕೆಂದರೆ, ಅವರಿಗೆ ರಿಯಾಯಿತಿ ಇದೆ. ಈಗ ನೌಕರಿಗಳಲ್ಲಿರುವವರು ಇಷ್ಟು ಶುಲ್ಕಕೊಟ್ಟು ಕಲಿಯಲು ತೊಂದರೆಯಾಗುವುದಿಲ್ಲ. ಆದರೆ ಹೊಸದಾಗಿ ಕಲಿಯುವ ವಿದ್ಯಾರ್ಥಿಗಳಿಗೆ ಯಾವ ರೀತಿ ರಿಯಾಯಿತಿ ಕೊಡಬೇಕು ಎಂಬುದನ್ನು ಪರಿಶೀಲನೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಈಗ ಕನ್ನಡ ಬೆರಳಚ್ಚುಗಾರರು ಮತ್ತು ಕನ್ನಡ ಶೀಘ್ರಲಿಪಿಗಾರರು ಹೆಚ್ಚಾಗಿ ಬೇಕಾಗಿರುವುದರಿಂದ, ಸಾಧಾರಣ ಕುಟುಂಬದಿಂದ ಬಂದಂಥ ವಿದ್ಯಾರ್ಥಿಗಳಿಗೆ ಇದನ್ನು ಕಲಿಯಲು ತೊಂದರೆಯಾಗುವುದಿಲ್ಲವೇ ? ಆದ್ದರಿಂದ ಇದನ್ನು ಕಡಿಮೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ಅದನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ಈ ಸಂಘದ ಅಧ್ಯಕ್ಷರು ಯಾರು ? ಆ ಸಂಘದ ವತಿಯಿಂದ ಏನಾದರೂ ಮನವಿಯನ್ನು ಸಲ್ಲಿಸಿದ್ದರೋ ಇಲ್ಲವೋ ಎಂಬುದನ್ನು ತಿಳಿಸಬೇಕು. ಮತ್ತೆ ಎಷ್ಟು ಜನ ಮನವಿಯನ್ನು ಸಲ್ಲಿಸಿದ್ದರು ?

ಶ್ರೀ ಬಿ. ರಾಚಯ್ಯ.—ಸ್ವಾಮಿ, ಈಗ ಸದ್ಯದಲ್ಲಿ ಆ ಬಗ್ಗೆ ಮಾಹಿತಿ ಇಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ನಾನು ತರಿಸಿ ಕೊಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೆ ಎಷ್ಟು ಜನ ಅರ್ಜಿಯನ್ನು ಸಲ್ಲಿಸಿದ್ದರು ? ಮತ್ತೆ ಕರ್ನಾಟಕ ರಾಜ್ಯದಲ್ಲಿ ಇಂಥ ಸಂಘಗಳು ಎಷ್ಟು ಇವೆ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದ್ದೇನೆ. ಸದ್ಯದ ಪರಿಸ್ಥಿತಿಯಲ್ಲಿ ಆ ಬಗ್ಗೆ ಮಾಹಿತಿ ಇಲ್ಲವೆಂದು.

ಅಧ್ಯಕ್ಷರು.—ಅಲ್ಪಾವಧಿ ಪ್ರಶ್ನೋತ್ತರ ವೇಳೆ ಮುಗಿಯಿತು.